**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | : | 301 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) |
| **ಉತ್ತರಿಸುವ ದಿನಾಂಕ** | : | 11.12.2024 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ವಿವರ |
|---|---|---|
| ಅ) | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿ ಸೌಕರ್ಯ ಕಲ್ಪಿಸಲು ಇರುವ ಅಡಚಣೆಗಳೇನು; ಎಲ್‌ಸಿಟಿ ಬಾರ್ಜ /ಮಿನಿ ಎಲ್‌ಸಿಟಿ ಬಾರ್ಜ ನೀಡುವ ಚಿಂತನೆ ಸರ್ಕಾರದ ಮುಂದಿದೆಯೇ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲಾಗುವುದು; | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕನವಾಡಿ ನಡುಗಡ್ಡೆಯ ಪ್ರದೇಶದಲ್ಲಿ ದೊಡ್ಡ ದೋಣಿ ಸೌಕರ್ಯ ಕಲ್ಪಿಸಲು ಯಾವುದೇ ಅಡಚಣೆ ಇರುವುದಿಲ್ಲ.<br>ಹೌದು ಎಲ್‌ಸಿಟಿ ಬಾರ್ಜ / ಮಿನಿ ಎಲ್.ಸಿ.ಟಿ ಬಾರ್ಜ ನೀಡುವ ಚಿಂತನೆ ಸರ್ಕಾರದ ಮುಂದಿದೆ.<br>ರೈತರ ಹಿತವನ್ನು ಕಾಪಾಡಲು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕಣವಾಡಿ ಗ್ರಾಮಕ್ಕೆ ಹೆಚ್ಚುವರಿ ಬೋಟ್ ನಿರ್ಮಿಸುವ (ಉದ್ದ15 ಮೀ. X ಅಗಲ 6 ಮೀ. ಸಾಮರ್ಥ್ಯ- 30 passenger, 1 Truck, 2 Four wheeler ಮತ್ತು 12 Two wheeler, ಇಂಜಿನ್ ಸಾಮರ್ಥ್ಯ- 2 x 120 HP) ಅಂದಾಜು 350.00 ಲಕ್ಷ ಮೊತ್ತದ ಅನುದಾನದ ಅವಶ್ಯಕತೆ ಇರುತ್ತದೆ. ಸದರಿ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಆ) | ಕಂಕನವಾಡಿ ನಡುಗಡ್ಡೆಗೆ ರಸ್ತೆ ಸಂಪರ್ಕ ಇರದ ಕಾರಣ ರೈತರ ಹಿತದೃಷ್ಟಿಯಿಂದ ದೊಡ್ಡ ಎಲ್‌ಸಿಟಿ ಬಾರ್ಜ /ಮಿನಿ ಎಲ್‌ಸಿಟಿ ಬಾರ್ಜ ನೀಡಿ ರೈತರ ಹಿತ ಕಾಪಾಡಲಾಗುವುದೇ; | |
| ಇ) | ಈ ನಡುಗಡ್ಡೆಯ ರೈತರು ತಾವು ಬೆಳೆದ ಬೆಳೆಗಳನ್ನು ಸಾಗಿಸಲು ನದಿ ದಾಟಿ ಸಾಗಿಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ನೋವಿನ ಸಂಗತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರದ ಸ್ಪಷ್ಟನೆ ಏನು? (ವಿವರ ನೀಡುವುದು) | ಹೌದು ,ಸರ್ಕಾರದ ಗಮನಕ್ಕೆ ಬಂದಿದೆ.<br>ಪ್ರಸ್ತುತ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಕಂಕಣವಾಡಿ ನಡುಗಡ್ಡೆಗೆ ಜನ ಮತ್ತು ಬೈಕ್‌ಗಳನ್ನು ಸಾಗಿಸಲು ಕೃಷ್ಣಾ ಮೇಲ್ದಂಡೆ ಯೋಜನೆ ಪುನರ್ವಸತಿ ವಿಭಾಗ, ನಂಬರ್-3 ಕಡಕೋಳ ಜಮಖಂಡಿ ರವರು, 02 ಅಲ್ಯೂಮಿನಿಯಂ ಯಾಂತ್ರಿಕ ನಾವೆಗಳನ್ನು ಪೂರೈಸಿದ್ದು, ಸದರಿ ನಾವೆಗಳನ್ನು ಕಂಕಣವಾಡಿ ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಲಾಗುತ್ತಿದೆ.<br>ಅನುದಾನದ ಲಭ್ಯತೆಗೆ ಒಳಪಟ್ಟು ಕಂಕನವಾಡಿ ನಡುಗಡ್ಡೆಗೆ ಉದ್ದ 15ಮೀ. X ಅಗಲ 6 ಮೀ. ನ ಎಲ್.ಸಿ.ಟಿ ಬಾರ್ಜನ್ನು ಒದಗಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಈ) | ಕಂಕನವಾಡಿ ನಡುಗಡ್ಡೆ ಪ್ರದೇಶದಲ್ಲಿ ಕೃಷ್ಣಾ ನದಿಯ ಮಹಾಪೂರದಿಂದ ಕಂಕನವಾಡಿ ನಡುಗಡ್ಡೆಯ ಜನರು ಪ್ರಯಾಣಕ್ಕೆ ಹಾಗೂ ಸದರಿ ಭಾಗದಲ್ಲಿ ಬೆಳೆದ ಕಬ್ಬು ಹಾಗೂ ಇತರೆ ಬೆಳೆಗಳನ್ನು ಸಾಗಿಸಲು ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು? | |

**IDD 89 BNS 2024**

**(ಮಂಕಾಳ ಎಸ್ ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**